# ದ್ರಾವಿಡ್ ಪಾಠದ ಫಸಲು

ಲಯ ಕಳೆದುಕೊಂಡು ಕಣ್ಣು ಮಿಟುಕಿಸುತ್ತಿದ್ದ ಹಳಬರು, ಗಾಯದಿಂದ ಚೇತರಿಸಿಕೊಂಡ ಕನಸಿಗರು, ಹುಮ್ಮಸ್ಸನ್ನೇ ಬಂಡವಾಳ ಮಾಡಿಕೊಂಡ ಹೊಸಬರು, ಎಲ್ಲರನ್ನೂ ದ್ರಾವಿಡ್ ನಿಭಾಯಿಸಿದ ರೀತಿಯಲ್ಲೇ ಕೋಚ್ ಆಗಿ ಅವರ ಅರಿವು ಎಂಥದು ಎನ್ನುವುದನ್ನು ಸಾರುತ್ತದೆ.

■ ವಿಶಾಖ ಎನ್.




ರಾಹುಲ್ ದ್ರಾವಿಡ್ ತಲೆಯೊಳಗೆ ಏನೇನೋ ಓಡಿಸಿಕೊಂಡು ಕೂತಾಗ

2003ರ ಟಿವಿಎಸ್ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಆಸ್ಟ್ರೇಲಿಯಾ ಪ್ರವೇಶಿಸಿ ಆಗಿತ್ತು. ಭಾರತ ಹಾಗೂ ನ್ಯೂಜಿಲೆಂಡ್ ಪೈಕಿ ಯಾವ ತಂಡ ಗೆಲ್ಲುವುದೋ ಅದು ಫೈನಲ್‌ಗೆ ಎಂಬಂಥ ಸ್ಥಿತಿ. ಮೊದಲು ಭಾರತ ಬ್ಯಾಟ್ ಮಾಡಿತು. ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್ ಶತಕಗಳ ಬಲದಿಂದ ಒಳ್ಳೆಯ ಮೊತ್ತ ದಾಖಲಿಸಿತ್ತು. 44ನೇ ಓವರ್‌ನಲ್ಲಿ ರಾಹುಲ್ ದ್ರಾವಿಡ್ ಬ್ಯಾಟ್ ಮಾಡಲು ಬಂದದ್ದು. 22 ಎಸೆತಗಳಲ್ಲೇ ಗಳಿಸಿದ್ದು ಅರ್ಧ ಶತಕ. ಮಿಡ್ ಆನ್, ಮಿಡ್ ವಿಕೆಟ್, ಲಾಂಗ್ ಆನ್ ಈ ದಿಕ್ಕುಗಳಲ್ಲಿ ದ್ರಾವಿಡ್ ಹೊಡೆದ ಚೆಂಡು ಆಕಾಶ ನೋಡಿದ್ದು ಇನ್ನೂ ಕ್ರಿಕೆಟ್ ಪ್ರಿಯರಿಗೆ ನೆನಪಿದೆ. ಅಷ್ಟು ತಣ್ಣಗಿನ ದ್ರಾವಿಡ್ ಹಾಗೆ ವೇಗವಾಗಿ ಆಡಲೂ ಸಾಧ್ಯ ಎನ್ನುವುದು ಆ ದಿನದಾಟದ ಪರಮ ಅಚ್ಚರಿ. ಸಿಕ್ಸರ್‌ಗಳನ್ನು ದ್ರಾವಿಡ್ ಕೂಡ ಹೊಡೆಯಬಲ್ಲರು, ಆಫ್‌ಸೈಡ್‌ನಲ್ಲಿ ಪಾಯಿಂಟ್, ಕವರ್ಸ್ ತಲೆ ಮೇಲೆ ಚೆಂಡನ್ನು ಕಳುಹಿಸುವುದು ಅವರಿಗೆ ಗೊತ್ತಿಲ್ಲದ್ದೇನೂ ಅಲ್ಲ ಎನ್ನುವುದೂ ಅನಾವರಣಗೊಂಡ ಇನಿಂಗ್ಸ್ ಅದು.

ರಾಹುಲ್ ದ್ರಾವಿಡ್ ಭಾರತ ಕ್ರಿಕೆಟ್ ತಂಡದ ಕೋಚ್ ಆಗಿ ಮತ್ತೊಮ್ಮೆ ಒಪ್ಪಂದ ವಿಸ್ತರಿಸಿಕೊಂಡಿದ್ದಾರೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಅವರ ಮೇಲೆ ವಿಶ್ವಾಸವಿದೆ ಎನ್ನುವುದಕ್ಕೆ ಈ ಒಪ್ಪಂದ ವಿಸ್ತರಣೆಯೇ ಕನ್ನಡಿ ಹಿಡಿಯುತ್ತದೆ.

ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ಸತತ ಹತ್ತು ಪಂದ್ಯ ಗೆದ್ದು, ಫೈನಲ್‌ನಲ್ಲಿ ಮಾತ್ರ ಸೋತಿತು. ತಂಡದ ಈ ಸ್ಥಿರ ಪ್ರದರ್ಶನದ ಹಿಂದೆ ದ್ರಾವಿಡ್ ಶ್ರಮ ಇದೆ ಎನ್ನುವುದನ್ನು ಎಂಥವರೂ ಒಪ್ಪಿಕೊಳ್ಳಬೇಕು. ಕೋಚ್ ಸ್ಥಾನಕ್ಕೆ ಅವರು ಇಷ್ಟು ಯೋಗ್ಯ ಆದದ್ದು ಹೇಗೆ ಎಂದು ಕೆಲವರು ವಿಶ್ಲೇಷಿಸತೊಡಗಿದ್ದಾರೆ.

ದ್ರಾವಿಡ್ ಅವರನ್ನು ಮೊದಲಿಗೆ ನಾವೆಲ್ಲ ಒಬ್ಬ ಟೆಸ್ಟ್ ಕ್ರಿಕೆಟ್ ಸ್ಪೆಷಲಿಸ್ಟ್ ಆಗಿಯೇ ನೋಡಿದ್ದು. ಪುಟಿದೆದ್ದು ಬರುವ ಚೆಂಡು ಆಫ್ ಸ್ಟಂಪ್‌ನ ಆಚೆಯ ದಿಕ್ಕಿಗೆ ಇದ್ದರೆ ಬ್ಯಾಟ್ ಅಂಚು ಅದಕ್ಕೆ ತಾಗದಂತೆ ರಕ್ಷಿಸಿಕೊಂಡು ವಿಕೆಟ್ ಉಳಿಸಿಕೊಳ್ಳುವುದು ಹೇಗೆ ಎನ್ನುವುದಕ್ಕೆ ಅವರ ಆಟ ಸದಾ ಕಾಲ ಪ್ರಾತ್ಯಕ್ಷಿಕೆಯಂತೆ. ಆಟಗಾರನಾಗಿ ದ್ರಾವಿಡ್ ಕ್ಷಮತೆ, ಸಹನೆಗೆ ಅವರ ಅಂತಹ ಧೋರಣೆ ಕನ್ನಡಿ ಹಿಡಿಯುತ್ತದೆ.

ಅದೇ ಸ್ವಭಾವದ ಅವರು ಕೋಚ್ ಆಗಿ ಏನು ಮಾಡಿದರು ಎನ್ನುವುದಕ್ಕೆ ವಿಶ್ವಕಪ್ ಪ್ರದರ್ಶನದಲ್ಲಿ ದಂಡಿಯಾಗಿ ಉದಾಹರಣೆಗಳು ಸಿಗುತ್ತವೆ. ಆ ಪೈಕಿ ಕೆಲವಕ್ಕೆ ನಾವು ಮಸೂರ ಹಾಕಬಹುದು.

ಈ ಸಲ ವಿಶ್ವಕಪ್ ಟೂರ್ನಿಯ ಸಂದರ್ಭದಲ್ಲಿ